ಮಾರ್ಚ್-2021

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ SWACHHAMEVA JAYATE

# ಸ್ವಚ್ಛತಾವಾಣಿ

ವಾರ್ತಾಪತ್ರ

ಜಲೋತ್ಸವ ಮನೆ ಮನೆಗೆ ಗಂಗೆ | Har Ghar Jal Jal Jeevan Mission

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ರಾಜ್ಯದ ಗ್ರಾಮೀಣ ಪ್ರದೇಶಗಳಿಗೆ ಶುದ್ಧ-ಸುರಕ್ಷಿತ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಗಳನ್ನು ಒದಗಿಸುವ ಕಾರ್ಯಗಳನ್ನು ಕೈಗೊಳ್ಳುತ್ತಾ ಬಂದಿರುತ್ತದೆ. ಮಾರ್ಚ್ 8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇಲಾಖೆಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 50 ಮಹಿಳಾ ಸಿಬ್ಬಂದಿಗೆ ಗೌರವ ಸಮರ್ಪಿಸುವ ಜೊತೆಗೆ ವೈಯಕ್ತಿಕ ಸ್ವಚ್ಛತೆ, ಶುಚಿತ್ವ, ಋತುಚಕ್ರ ನಿರ್ವಹಣೆ ಮತ್ತು ನೈರ್ಮಲ್ಯದ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಈ ಮೂಲಕ ಇಲಾಖಾ ಮಟ್ಟದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಗ್ರಾ.ಕು.ನೀ ಮತ್ತು ನೈ ಇಲಾಖೆಯ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಉಪ ಕಾರ್ಯದರ್ಶಿಯವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇಲಾಖೆಯ ಎಲ್ಲಾ ಮಹಿಳಾ ಸಿಬ್ಬಂದಿ ಹಾಜರಿದ್ದರು.




## ‘Social Media Champion’ ಸ್ಪರ್ಧೆ

ಗ್ರಾ.ಕು.ನೀ ಮತ್ತು ನೈ ಇಲಾಖೆಯು ನಿರ್ವಹಿಸುತ್ತಿರುವ ಫೇಸ್‌ಬುಕ್‌ಪೇಜ್ **(https://www.facebook.com/GovtOfKarnatakaRdpr/)** ಹಾಗೂ ಯೂಟ್ಯೂಬ್ ಚಾನೆಲ್ **(https://youtube.com/c/GovtOfKarnatakaRDPR)** ಗಳನ್ನು ಗ್ರಾಮೀಣ ಕರ್ನಾಟಕದಾದ್ಯಂತ ಹೆಚ್ಚು ಪ್ರಚಾರ ಮಾಡುವ ನಿಟ್ಟಿನಲ್ಲಿ, ಇಲಾಖೆಯಡಿ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಹಾಗೂ **ಜಲ ಜೀವನ್ ಮಿಷನ್** ಯೋಜನೆಗಳಡಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಜಿಲ್ಲಾ ಸಮಾಲೋಚಕರುಗಳ ನಡುವೆ ದಿನಾಂಕ:01.03.2021 ರಿಂದ 31.08.2021 ರವರೆಗೆ 6 ತಿಂಗಳುಗಳ ಕಾಲ **Social Media Champion** ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಇಲಾಖೆಯಡಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಮಾಲೋಚಕರುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರತಿ ಮಾಹೆಯಲ್ಲಿ ರಾಜ್ಯ ಕಚೇರಿಯ ಫೇಸ್‌ಬುಕ್ ಪೇಜ್ ಮತ್ತು ಯೂಟ್ಯೂಬ್ ಚಾನೆಲ್ ಅನ್ನು ಯಾರು ಹೆಚ್ಚು ಪ್ರಚಾರ ಮಾಡುತ್ತಾರೋ ಅಂತಹ ಸಮಾಲೋಚಕರುಗಳಿಗೆ ಮಾಸಿಕವಾಗಿ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ನೀಡಲು ನಿರ್ಧರಿಸಲಾಗಿದೆ. ಒಟ್ಟಾರೆ, ಸ್ಪರ್ಧೆಯ ಅವಧಿಯಲ್ಲಿ ಯಾವ ಸಮಾಲೋಚಕರು ರಾಜ್ಯ ಕಚೇರಿಯ ಫೇಸ್‌ಬುಕ್ ಪೇಜ್ ಮತ್ತು ಯೂಟ್ಯೂಬ್ ಚಾನೆಲ್ ಅನ್ನು ಪ್ರಚಾರ ಮಾಡುವಲ್ಲಿ ಅತ್ಯುತ್ತಮ ಸ್ಪರ್ಧೆಯನ್ನು ನೀಡುತ್ತಾರೋ ಅಂತಹ ಸಮಾಲೋಚಕರುಗಳಿಗೆ ಸ್ಟಾರ್ ರೇಟಿಂಗ್ ನೀಡುವ ಜೊತೆಗೆ ಬಂಪರ್ ಬಹುಮಾನವನ್ನೂ ನೀಡಿ ಗೌರವಿಸಲು ತೀರ್ಮಾನಿಸಲಾಗಿದೆ.




## ತರಬೇತಿ ಕಾರ್ಯಕ್ರಮಗಳು

### ‘ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತ ತರಬೇತಿ ಕಾರ್ಯಕ್ರಮ’



**ಘನ ಮತ್ತು ದ್ರವ ತ್ಯಾಜ್ಯ** ನಿರ್ವಹಣಾ ಯೋಜನೆಯ ಅನುಷ್ಠಾನ ಮತ್ತು ಹೊಸ ನಾವೀನ್ಯತೆಗಳ ಕುರಿತು ಮಾರ್ಚ್ 3 ಮತ್ತು ಮಾರ್ಚ್ 4 ರಂದು ಯುನಿಸೆಫ್ ಸಹಭಾಗಿತ್ವದಲ್ಲಿ ಸಾಹಸ್ ಸಂಸ್ಥೆಯ ತಾಂತ್ರಿಕ ನೆರವಿನೊಂದಿಗೆ ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ **SLWM Consultants** ಹಾಗೂ ಆಯ್ದ ಜಿಲ್ಲೆಗಳ **IEC, HRD, SH** ಸಮಾಲೋಚಕರುಗಳಿಗೆ **ಘನ ಮತ್ತು ದ್ರವ ತ್ಯಾಜ್ಯ** ನಿರ್ವಹಣಾ ಯೋಜನೆಯ ಅನುಷ್ಠಾನ ಮತ್ತು ನಾವೀನ್ಯತೆಗಳ ಹಾಗೂ ತಾಂತ್ರಿಕ ವಿಚಾರಗಳ ಕುರಿತು ತರಬೇತಿ ನೀಡಲಾಯಿತು. ಉಪ ನಿರ್ದೇಶಕರು, **ಸ್ವಚ್ಛ ಭಾರತ್ ಮಿಷನ್(ಗ್ರಾ)**, ಯುನಿಸೆಫ್ ರಾಜ್ಯ ಸಂಯೋಜಕರು, **HRD** ರಾಜ್ಯ ಸಮಾಲೋಚಕರು ಮತ್ತು ಸಾಹಸ್ ಸಂಸ್ಥೆಯ ವಿಷಯ ಪರಿಣತರು ಜಿಲ್ಲಾ ಸಮಾಲೋಚಕರುಗಳಿಗೆ ತರಬೇತಿ ನೀಡಿದರು.







### JJM ಪರಿಣಾಮಕಾರಿ ಅನುಷ್ಠಾನ ಕುರಿತು ತರಬೇತಿ ಕಾರ್ಯಕ್ರಮ

Har Ghar Jal
Jal Jeevan Mission

**ಜಲ ಜೀವನ್ ಮಿಷನ್** ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ, **ಐ.ಎಸ್.ಎ** ತಂಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಅವರ ಜವಾಬ್ದಾರಿ ಕುರಿತು ತರಬೇತಿಯನ್ನು ಆಯೋಜಿಸಲಾಗಿದೆ. 3 ಬ್ಯಾಚ್‌ಗಳಲ್ಲಿ ನಡೆಯಲಿರುವ ಈ ತರಬೇತಿ ಕಾರ್ಯಕ್ರಮಕ್ಕೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ **ಐ.ಎಸ್.ಎ** ತಂಡದ ಎಲ್ಲಾ ಸಿಬ್ಬಂದಿ ಭಾಗವಹಿಸಲಿದ್ದಾರೆ.